ದಿಃ07.01.2023 OS No.13/2015 PW-1

ದಿಃ07.01.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ವಕೀಲರಿಂದ

ದಿಃ26.06.2011 ರಂದು ನಮ್ಮ ಮನೆಯ ಗೃಹಪ್ರವೇಶ ಆಗಿರುತ್ತದೆ. ಸದರಿ ಕಾರ್ಯಕ್ರಮಕ್ಕೆ ವಾದಿ ಮತ್ತು ಅವರ ಅಣ್ಣ ಸತೀಶ್ ಬಂದಿದ್ದರು. ಆ ರೀತಿ ಗೃಹಪ್ರವೇಶ ಆದ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಯು ದಿಃ23.12.2014 ರಂದು ಚನ್ನಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ನನಗೆ ಜಿ.ಪಿ.ಎ ಬರೆದುಕೊಟ್ಟಿರುತ್ತಾರೆ. ಒಂದು ವಾರದ ಪೂರ್ವದಲ್ಲಿ ನನಗೆ ವಾದಿಯು ಜಿ.ಪಿ.ಎ ಬರೆದುಕೊಡುವುದಾಗಿ ಹೇಳಿರುತ್ತಾರೆ. ನಂತರ ಮೂರು ದಿನ ಕಳೆದು ಮತ್ತೆ ಒಂದು ಬಾರಿ ಜಿ.ಪಿ.ಎ ಬರೆದುಕೊಡುವುದಾಗಿ ಹೇಳಿರುತ್ತಾರೆ. ಆ ರೀತಿ ಜಿ.ಪಿ.ಎ ಬರೆದುಕೊಡುವಾಗ ವಾದಿ, ನಾನು ಮತ್ತು ಸತೀಶ್ ಇದ್ದೆವು. ವಾದಿಯ ಅಣ್ಣನು ವ್ಯವಸಾಯ ಮತ್ತು ವ್ಯವಹಾರ ಮಾಡುತ್ತಾರೆ. ಅವರು ಫೈನಾನ್ಸ್ ವ್ಯವಹಾರವನ್ನು ಮಾಡುತ್ತಾರೆ. ಸತೀಶ್ ರವರಿಗೆ ಸೇರಿದಂತೆ ಸುಮಾರು 5 ಎಕರೆ ಕೃಷಿ ಜಮೀನು ಇರಬಹುದು. ಅದು ನೀರಾವರಿ ಜಮೀನು ಆಗಿರುತ್ತದೆ.

ಜಿ.ಪಿ.ಎ ಮಾಡಲು ಛಾಪಾಕಾಗದವನ್ನು ವಾದಿಯು ತೆಗೆದುಕೊಂಡು ಬಂದಿದ್ದರು. ಅದನ್ನು ನನ್ನ ಮತ್ತು ವಾದಿಯ ಹೆಸರಿಗೆ ಜಂಟಿಯಾಗಿ ತೆಗೆದುಕೊಂಡಿದ್ದರು. ಸದರಿ ಪತ್ರವನ್ನು ಎಲ್ಲಿ ಖರೀದಿ ಮಾಡಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಪತ್ರವು 100 ರೂಪಾಯಿ ಮುಖಬೆಲೆ ಹೊಂದಿರಬಹುದು. ಸದರಿ ಜಿ.ಪಿ.ಎ ಗೆ ಸತೀಶ್ ರವರು ಸಹಿ ಮಾಡಿರುವುದಿಲ್ಲ. ನಾನು ಮತ್ತು ವಾದಿಯು ಮಾತ್ರ ಜಿ.ಪಿ.ಎ ಗೆ ಸಹಿ ಮಾಡಿರುತ್ತೇವೆ. ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ.1 ಅನ್ನು ವಾದಿಯೇ ಬೆರಳಚ್ಚು ಮಾಡಿಸಿಕೊಂಡು ಬಂದಿದ್ದರು. ಅವರು ಎಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಜಿ.ಪಿ.ಎ ಅನ್ನು ತಯಾರು ಮಾಡಿಸಿದ್ದರು ನಂತರ ನಾನು ಹೋಗಿ ಸಹಿ ಮಾಡಿರುತ್ತೇನೆ. ಸದರಿ ಜಿ.ಪಿ.ಎ ಪತ್ರವು 2 ಅಥವಾ 3 ಪುಟಗಳನ್ನು ಹೊಂದಿರಬಹುದು. ನಾನು ಸಹಿ ಮಾಡಿ

ಹೊರಟು ಹೋಗಿರುತ್ತೇನೆ. ನಾನು ಛಾಯಾಗ್ರಾಹಕ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ವಾದಿಯು ಬೇರೆ ವ್ಯವಹಾರಕ್ಕೆ ಸಂಬಂಧವಾರಿ ನನಗೆ ಜಿ.ಪಿ.ಎ ನೀಡಿರುವುದಿಲ್ಲ. ವಾದಿಯು ತಾಲ್ಲೂಕು ಕಚೇರಿಯಲ್ಲಿ ಯಾವತ್ತೂ ನನ್ನ ಪರವಾಗಿ ಜಿ.ಪಿ.ಎ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ರೀತಿ ಜಿ.ಪಿ.ಎ ಬರೆದುಕೊಟ್ಟಿರುತ್ತಾರೆ ಎಂದು ಹೇಳುವುದು ಸರಿಯಲ್ಲ.

ದಾವಾ ಸ್ವತ್ತನ್ನು 1ನೇ ಪ್ರತಿವಾದಿಯು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ಎಷ್ಟು ಮೊತ್ತಕ್ಕೆ ಮತ್ತು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. 1ನೇ ಪ್ರತಿವಾದಿಗೆ ಎಷ್ಟು ಸಾಲ ಇತ್ತುಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಾಲದ ವ್ಯವಹಾರದ ಬಗ್ಗೆ ನಾನು ವಾದಿಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ ದಾವಾ ಸ್ವತ್ತು ಕ್ರಯವಾಗುವ ಸಮಯದಲ್ಲಿ ಮಾತ್ರ ತುರ್ತು ಇರುತ್ತದೆ ಎಂದು ಹೇಳಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.